# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 28 (201) |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 18.08.2026 |
| ಉತ್ತರಿಸುವ ಸಚಿವರು | : | ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕ್ರೈಸ್ತ ಸಮುದಾಯದ ಜನಸಂಖ್ಯೆ ಎಷ್ಟು; ಈ ಸಮುದಾಯದವರಿಗೆ ಆರ್ಥಿಕ, ಶಿಕ್ಷಣ ಮತ್ತು ಅವರ ಮೂಲ ಕಸಬುಗಳ ಬಗ್ಗೆ ಸರ್ಕಾರ ಅಂಕಿ ಅಂಶಗಳನ್ನು ತಯಾರಿಸಿದೆಯೇ; ಈ ಬಗ್ಗೆ ಸರ್ಕಾರದ ಬಳಿ ಇರುವ ಅಂಕಿ ಅಂಶಗಳಾವುವು;(ವಿವರ ನೀಡುವುದು) | ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ನಡೆಸಿದ ರಾಜ್ಯದ ಎಲ್ಲಾ ನಾಗರಿಕರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ-2025ರ ವರದಿಯನ್ನು ದಿನಾಂಕ:27.05.2026 ರಂದು ಸ್ವೀಕೃತವಾಗಿರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದನ್ವಯ ಗೌಪ್ಯತೆಯನ್ನು ಕಾಪಾಡಬೇಕಾಗಿದೆ. ಅದರಂತೆ ಕ್ರಮವಹಿಸಲಾಗಿದೆ. |
| ಆ) | ಕ್ರೈಸ್ತ ಸಮುದಾಯಕ್ಕೆ ಸರ್ಕಾರಿ ಉದ್ಯೋಗ, ಶಿಕ್ಷಣದಲ್ಲಿ ಮೀಸಲಾತಿಯನ್ನು ಪಡೆಯಲು ಸಾಧ್ಯವಾಗುತ್ತಿಲ್ಲವೆಂಬ ಬಗ್ಗೆ ಸರ್ಕಾರದ ಬಳಿ ವರದಿ ಇದೆಯೇ; ಪ್ರಸ್ತುತ 3ಬಿ ಮೀಸಲಾತಿ ಪಟ್ಟಿಯಲ್ಲಿದ್ದು, ಇತರ ಪ್ರಮುಖ ಸಮುದಾಯದ ಜೊತೆ ಪೈಪೋಟಿ ನಡೆಸಲು ಸಾಧ್ಯವಾಗದೇ ಇರುವುದರಿಂದ ಕ್ರೈಸ್ತ ಸಮುದಾಯದ ಇತರ ಮುಸ್ಲಿಂ ಅಲ್ಪಸಂಖ್ಯಾತರ (2ಬಿ) ಸಮುದಾಯಕ್ಕೆ ನೀಡಿದ್ದಂತೆ, ಕ್ರೈಸ್ತ ಸಮುದಾಯಕ್ಕೂ, [ಠ] ಜನಸಂಖ್ಯೆಯ ಆಧಾರದಲ್ಲಿ ಪ್ರತ್ಯೇಕ ಸಮೂಹ ಸೃಷ್ಟಿಸಬೇಕೆಂಬ ಬೇಡಿಕೆಯ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಪ್ರಸ್ತುತ ಚಾಲ್ತಿಯಲ್ಲಿರುವ ಸರ್ಕಾರದ ಆದೇಶ ದಿನಾಂಕ:30.03.2002ರ ಅನುಸಾರ ಈಗಾಗಲೇ ಕ್ರೈಸ್ತ ಸಮುದಾಯಕ್ಕೆ ಶಿಕ್ಷಣ ಮತ್ತು ಉದ್ಯೋಗದ ಮೀಸಲಾತಿಗಾಗಿ III(ಬಿ) ರಡಿ ಶೇ.5% ರಷ್ಟು ಮೀಸಲಾತಿ ಒದಗಿಸಲಾಗಿದ್ದು, ಅರ್ಹ ಅಭ್ಯರ್ಥಿಗಳು ಸೌಲಭ್ಯವನ್ನು ಪಡೆಯುತ್ತಿರುತ್ತಾರೆ. |

...2

| | | |
|---|---|---|
| ಇ) | 2025-26ನೇ ಸಾಲಿನಲ್ಲಿ ಕ್ರೈಸ್ತ ಅಭಿವೃದ್ಧಿ ನಿಗಮಕ್ಕೆ ರೂ.250 ಕೋಟಿ ಅನುದಾನ ನೀಡಿದ್ದು, 2026-27ನೇ ಸಾಲಿನಲ್ಲಿ ಕೇವಲ ರೂ.85 ಕೋಟಿ ಅನುದಾನ ನೀಡುವುದರ ಮೂಲಕ ಕ್ರೈಸ್ತ ಸಮುದಾಯದ ಬೇಡಿಕೆ ಪೂರೈಸಲು ಅನುದಾನದ ಕೊರತೆಯಾಗಿದ್ದು, ಅನುದಾನವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮವೇನು; (ವಿವರ ನೀಡುವುದು) | 2025-26ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮಕ್ಕೆ ರೂ.250.00 ಕೋಟಿಗಳ ಅನುದಾನ ಒದಗಿಸಲಾಗುವುದು ಎಂದು ಘೋಷಿಸಲಾಗಿದ್ದು, ರೂ.85.00 ಕೋಟಿಗಳ ಅನುದಾನವನ್ನು ಒದಗಿಸಲಾಗಿರುತ್ತದೆ.<br><br>ಅದರಂತೆ, ಒದಗಿಸಲಾದ ರೂ.85.00 ಕೋಟಿ ಅನುದಾನದಲ್ಲಿ ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮ ನಿಯಮಿತದಲ್ಲಿನ ಕಾಮಗಾರಿ ಆಧಾರಿತ ಯೋಜನೆ/ಕಾರ್ಯಕ್ರಮಗಳು ಹಾಗೂ ವಿವಿಧ ಸಾಲ, ಸಬ್ಸಿಡಿ ಹಾಗೂ ಸಹಾಯಧನ ಕಾರ್ಯಕ್ರಮಗಳಿಗೆ ನಿಯಮಾನುಸಾರ ವೆಚ್ಚ ಮಾಡಲಾಗಿದ್ದು, ವಿವರವನ್ನು <u>**ಅನುಬಂಧ-1ರಲ್ಲಿ**</u> ನೀಡಲಾಗಿದೆ.<br><br>2025-26ನೇ ಸಾಲಿನಲ್ಲಿ ಒದಗಿಸಲಾಗಿರುವ ರೂ.85.00 ಕೋಟಿಗಳಲ್ಲಿ ರೂ.10.23 ಕೋಟಿ ಅನುದಾನವು ಉಳಿಕೆಯಾಗಿರುತ್ತದೆ.<br><br>2026-27ನೇ ಸಾಲಿನಲ್ಲಿ ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮಕ್ಕೆ ರೂ.93.50 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ.<br><br>ಪ್ರಸ್ತುತ ನಿಗಮದಲ್ಲಿ ಒಟ್ಟು ರೂ.103.74 ಕೋಟಿಗಳ ಅನುದಾನವು ಲಭ್ಯವಿದ್ದು, ಸದರಿ ಅನುದಾನವು ಸಂಪೂರ್ಣವಾಗಿ ವೆಚ್ಚವಾದ ನಂತರ ಬೇಡಿಕೆಯನುಸಾರ ಆರ್ಥಿಕ ಇಲಾಖೆಗೆ ಹೆಚ್ಚುವರಿ ಅನುದಾನ ಕೋರಲಾಗುವುದು. |
| ಈ) | ಕ್ರೈಸ್ತ ಅಭಿವೃದ್ಧಿ ನಿಗಮಕ್ಕೆ ಸ್ವಂತ ಕಟ್ಟಡ ಒದಗಿಸಿಕೊಡಲು ಸರ್ಕಾರವು ಇತರೆ ನಿಗಮಕ್ಕೆ ನೀಡಿದಂತೆ ಸರ್ಕಾರದ ವತಿಯಿಂದ ಸ್ಥಳ ಮತ್ತು ಕಟ್ಟಡ ನಿರ್ಮಾಣ ಮಾಡಲು ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮವು ಪ್ರಸ್ತುತ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸ್ವಂತ ಕಟ್ಟಡ ನಿರ್ಮಾಣ ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. |

| | | |
|---|---|---|
| ಉ) | ಕ್ರೈಸ್ತ ಸಮುದಾಯದವರು, ಬೇರೆ ಸಮುದಾಯದಂತೆ ತಮ್ಮ ಪವಿತ್ರಯಾತ್ರಾ ಸ್ಥಳವಾದ ಜೆರೋಸಲಾಮ್‌ಗೆ ತೆರಳಲು ಸರ್ಕಾರದ ಮುಂದೆ ಇಡಲಾಗಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಕ್ರೈಸ್ತ ಸಮುದಾಯದವರು ಬೇರೆ ಸಮುದಾಯದಂತೆ ತಮ್ಮ ಪವಿತ್ರ ಯಾತ್ರಾ ಸ್ಥಳವಾದ ಜೆರೂಸಲಾಮ್‌ಗೆ ತೆರಳಲು ಅವಕಾಶ ಮಾಡಿಕೊಡಬೇಕೆಂಬ ಬೇಡಿಕೆಯು ಪರಿಶೀಲನೆಯಲ್ಲಿರುತ್ತದೆ. |

**ಸಂಖ್ಯೆ: MWD-LMQ/106/2026**

**(ಯು.ಟಿ.ಖಾದರ್ ಫರೀದ್)**
ಆರೋಗ್ಯ ಮತ್ತು ಕುಟುಂಬ
ಕಲ್ಯಾಣ ಹಾಗೂ ಅಲ್ಪಸಂಖ್ಯಾತರ
ಕಲ್ಯಾಣ, ಹಜ್ ಮತ್ತು ವಕ್ಫ್ ಸಚಿವರು

## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ'ಸೋಜಾರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:201(28)ಕ್ಕೆ ಅನುಬಂಧ

| ಕ್ರ. ಸಂ | ಯೋಜನೆಯಹೆಸರು | 2025-26ನೇ ಸಾಲಿನಲ್ಲಿ ಸಾಧನೆ ವಿವರ (ರೂ. ಲಕ್ಷಗಳಲ್ಲಿ) | |
|---|---|---|---|
| ಸಾಲ ಸೌಲಭ್ಯ ಯೋಜನೆ/ಕಾರ್ಯಕ್ರಮ | | | |
| | | ಆರ್ಥಿಕ | ಭೌತಿಕ |
| 1 | ಅರಿವು ಸಾಲ ಯೋಜನೆ | 25.57 | 40 |
| 2 | ಸಾಗರೋತ್ತರ ಶಿಕ್ಷಣ ಸಾಲ ಯೋಜನೆ | 0.00 | 0 |
| 3 | ಸ್ವಾವಲಂಬಿ ಸಾರಥಿ ಯೋಜನೆ (ಆಟೋ ಮತ್ತು ಟ್ಯಾಕ್ಸಿ) | 369.75 | 151 |
| 4 | ಗಂಗಾ ಕಲ್ಯಾಣ | 0.00 | 0 |
| 5 | ನೇರ ವ್ಯಾಪಾರ ಯೋಜನೆ | 0.00 | 0 |
| 6 | ಮಹಿಳಾಸ್ವ ಸಹಾಯ ಗುಂಪುಗಳಿಗೆ ಸಹಾಯಧನ ಯೋಜನೆ | 0.00 | 0 |
| 7 | ಶ್ರಮಶಕ್ತಿ ಯೋಜನೆ | 1144.00 | 2288 |
| 8 | ವೃತ್ತಿ ಪ್ರೋತ್ಸಾಹ ಯೋಜನೆ | 2981.00 | 2981 |
| 10 | IEC ಸಂಬಂಧಿತ ಕಾರ್ಯಕ್ರಮ/ತರಬೇತಿಗಳು | 106.20 | - |
| 11 | ಆಡಳಿತಾತ್ಮಕ ವೆಚ್ಚಗಳು | 177.28 | - |
| ಒಟ್ಟು | | **4803.80** | **5460** |
| ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿ ಯೋಜನೆ | | | |
| i | ಚರ್ಚ್‌ದುರಸ್ಥಿ/ ನವೀಕರಣ/ ಜೀರ್ಣೋದ್ಧಾರ/ ಮೇಲ್ಛಾವಣಿ/ ಚರ್ಚ್ ಆವರಣ ಗೋಡೆ | 1377.53 | 85 |
| ii | ಸಮುದಾಯಭವನ | 475.00 | 19 |
| iii | ಸ್ಮಶಾನದ ಅಭಿವೃದ್ಧಿ | 359.24 | 26 |
| iv | ಅನಾಥಾಶ್ರಮ/ವೃದ್ಧಾಶ್ರಮ | 460.65 | 23 |
| | **ಒಟ್ಟು** | **2672.42** | **153** |
| | **ಸಮಗ್ರ ಒಟ್ಟು ರೂ.** | **7476.22** | **5613** |

**2025-26ನೇ ಸಾಲಿನ ಫೋರ್ಕಾಸ್ಟ್**

(ರೂ.ಕೋಟಿಗಳಲ್ಲಿ)

| | | |
|---|---|---|
| 1 | ಬಿಡುಗಡೆ ಮಾಡಲಾದ ಅನುದಾನ | **85.00** |
| 2 | ವೆಚ್ಚ ಮಾಡಲಾದ ಅನುದಾನ | **74.76** |
| 3 | ಉಳಿಕೆಯಾದ ಅನುದಾನ | **10.23** |

ವ್ಯವಸ್ಥಾಪಕರ ನಿರ್ದೇಶಕರು
ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮ (ನಿ).
ಬೆಂಗಳೂರು.